


International Journal of Kannada Research
www.kannadajournal.com

**ISSN: 2454–5813**
IJKR 2021; 7(2): 24-28
© 2021 IJKR
www.kannadajournal.com
Received: 16-02-2021
Accepted: 18-03-2021

**ಶ್ರೀಮತಿ ಜಯಶೀಲ ಎಂ ಎನ್**
ಕನ್ನಡ ವಿಭಾಗದ ಮುಖ್ಯಸ್ಥರು,
ಜೆಎಸ್‌ಎಸ್ ಕಲಾ ಮತ್ತು
ವಾಣಿಜ್ಯ ಕಾಲೇಜು,
ಗುಂಡ್ಲುಪೇಟೆ, ಕರ್ನಾಟಕ,
ಭಾರತ

Corresponding Author:
**ಶ್ರೀಮತಿ ಜಯಶೀಲ ಎಂ ಎನ್**
ಕನ್ನಡ ವಿಭಾಗದ ಮುಖ್ಯಸ್ಥರು,
ಜೆಎಸ್‌ಎಸ್ ಕಲಾ ಮತ್ತು
ವಾಣಿಜ್ಯ ಕಾಲೇಜು,
ಗುಂಡ್ಲುಪೇಟೆ, ಕರ್ನಾಟಕ,
ಭಾರತ

# ಬಂದರೋ ಬಂದರು – ಡಾ. ವಿಜಯಾ “ಬಂದರೋ ಬಂದರು ” ಮುಗ್ಧ ಜನರ ಶೋಷಣೆಗೆ ಹಿಡಿದ ಕೈಗನ್ನಡಿ

**ಶ್ರೀಮತಿ ಜಯಶೀಲ ಎಂ ಎನ್**

ಲೇಖಕಿ ಡಾ. ವಿಜಯಾ ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಸಾಹಿತಿಯಾಗಿ, ಪತ್ರಕರ್ತೆಯಾಗಿ, ಅಂಕಣಕಾರ್ತಿಯಾಗಿ, ಇಳಾ ಪ್ರಕಾಶನದ ಸ್ಥಾಪಕರಾಗಿ ಮಹತ್ವದ ಕೆಲಸ ಮಾಡಿದ್ದಾರೆ. ಕೇಳ್ರಪ್ಪೊ ಕೇಳಿ, ಬಂದರೋ ಬಂದರು, ಧನ್ವಂತರಿಯ ನೆರಳು, ಮುಖವಿಲ್ಲದವರು ಎನ್ನುವ ಬೀದಿ ನಾಟಕಗಳ ರಚನೆಯನ್ನು ಮಾಡಿ ಪ್ರದರ್ಶನವನ್ನು ಮಾಡುವ ಮುಖೇನ ಮಹತ್ತರ ಸಾಧನೆಯನ್ನು ಮಾಡಿದ್ದಾರೆ. ಸಾಹಿತ್ಯ ಸರಸ್ವತಿಯ ಸೇವೆಯನ್ನು ಮಾಡಿದ ವಿಜಯಾ ಅವರಿಗೆ ಸಾಕಷ್ಟ ಪ್ರಶಸ್ತಿ ಪುರಸ್ಕಾರಗಳು ದೊರಕಿವೆ. ಇವರ ಬಂದರೋ ಬಂದರು ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಪಡೆದಿದೆ.

ನಾಟಕದ ವಸ್ತು ಕಿಷ್ಕಿಂದಾಪುರದ ದರೋಡೆಕೋರನಾಗಿದ್ದ ಪರಮೇಶ್ವರಪ್ಪ ಬದವಲಾವಣೆಗೆ ಒಳಗಾಗಿ ಪಾಪಿಗಳನ್ನು ಪುನೀತರನ್ನಾಗಿ ಮಾಡುವ ಉದ್ದೇಶದಿಂದ ದೇವಸ್ಥಾನ ಕಟ್ಟುವ ಮಹಾಕಾರ್ಯಕ್ಕಾಗಿ ತನ್ನ ಇಬ್ಬರು ಶಿಷ್ಯರ ಜೊತೆ ಕಾಣಿಕೆ ಹುಂಡಿ ಹಿಡಿದು ಜನರಿಂದ ಹಣ ಸಂಗ್ರಹಿಸಲು ಬರುವುದೇ ಪ್ರಾರಂಭದ ದೃಶ್ಯ.

ಮೊದಲಿಗೆ ಎಲ್ಲರನ್ನು ಕಾಡುವ ಪ್ರಶ್ನೆ ದೇವರು, ಆನಂತರ ದೇವಸ್ಥಾನ, ದೇವರು ಎನ್ನುವ ಪ್ರಶ್ನೆಗೆ ಅನಾದಿ ಕಾಲದಿಂದಲೂ ಉತ್ತರ ಹುಡುಕುವ ಪ್ರಯ್ನತ ನಿರಂತರವಾಗಿ ನಡೆಯುತ್ತಲೇ ಇದೆ, ಇಂದಿಗೂ ಉತ್ತರ ಸಿಗದ ಪ್ರಶ್ನೆಯಾಗಿಯೇ ಇದೆ. ಮಾನವ ಸಮುದಾಯ ಎಂದು ಉದಯವಾಯಿತೋ ಅಂದೇ ಮನುಷ್ಯ ತನ್ನ ಸುತ್ತಲಿನ ಪ್ರಪಂಚವನ್ನು ಕುತೂಹಲದಿಂದ ನೋಡಲಾರಂಭಿಸಿದ ಅವನಿಗೆ ಕಂಡದ್ದು ಅಗ್ನಿ ಪರ್ವತಗಳಿಂದ ಭುಗಿಲೆದ್ದು ಗಗನಕ್ಕೆ ಚಿಮ್ಮುತ್ತಿರುವ ಜ್ವಾಲಾಮುಖಿ, ಕಾದು ಕರಗಿ ಎಲ್ಲವನ್ನು ಸುಟ್ಟು ಭಸ್ಮಗೈಯುತ್ತಿರುವ ಲಾವಾರಸ, ಮೋಡದಿಂದ ಸುರಿದ ಧಾರಕಾರವಾದ ಮಳೆ, ಕಣ್ಣು ಕೋರೈಸುವ ಮಿಂಚು, ಗುಡುಗಿನ ಆರ್ಭಟ, ಸಿಡಿಲಿನ ಮಿಂಚಿನ ಹೊಡೆತ, ಮೇರೆ ಮೀರಿದ ಪ್ರವಾಹವನ್ನು ಸೃಷ್ಟಿಸುವ ಸಮುದ್ರದ ರೌದ್ರಾವತಾರ, ಪ್ರಕೃತಿಯ ಈ ಭಯಂಕರತೆಯನ್ನು ಕಂಡು ನಾನು ಹೇಗೆ ತಾನೆ ಬದುಕಿಯೇನು ಅನಿಸಿರಬೇಕು ಮುಗ್ಧ ಮಾನವಿಗೆ

ಜೀವನದ ತಿರುವುಗಳಂತೆ ಪ್ರಕೃತಿಗೂ ಹಲವು ಮುಖಗಳಿವೆ ರೌದ್ರಾವತಾರದೊಂದಿಗೆ ಪಂಚೇಂದ್ರಿಯಗಳಿಗೆ ಸ್ವರ್ಗಸುಖದ ತಣಿವನ್ನು ನೀಡುವ, ರೋಮಾಂಚಕಾರಿಯಾದ ಅನುಭವಗಳನ್ನು ನೀಡುವ ಸ್ನಿಗ್ದ ಸೌಂದರ್ಯದ ಇನ್ನೊಂದು ಮುಖ. ಬೆಳಗಿನ ಸೂರ್ಯೋದಯ ಕೇವಲ ಪ್ರಾಕೃತಿಕ ವ್ಯಾಪಾರವಲ್ಲ ಬೇಂದ್ರೆಯವರ ಮಾತಿನಲ್ಲಿ ಇದು ಬರೀ ಬೆಳಗಲ್ಲೋ ಅಣ್ಣಾ ಎನ್ನುವ ನುಡಿ ಎಷ್ಟು ಸಾರ್ಥಕವಾದುದು ಜಡವಾಗಿದ್ದ ಜಗತ್ತಿಗೆ ಕ್ಷಣಮಾತ್ರದಲ್ಲಿ ಬೆಳಕಿನ ಜೀವ ಚೈತನ್ಯದ ಅಮೃತವನ್ನು ನೀಡಿ ಪುಳಕಗೊಳಿಸುವ ಸುರ್ಯೋದಯ ಕೆಂಪಾದ ಬಣ್ಣಗಳಿಂದ ವಿವಿಧ ಬೆಡಗುಗಳ ಮನೋರಂಜನೆ ನೀಡುವ ಸೂರ್ಯಾಸ್ತಗಳ ಬಣ್ಣದ ಸಿರಿ, ಕಾಮನಬಿಲ್ಲಿನ ಸೊಗಸು,ಮಳೆಯಿಂದ ತೊಯ್ದು ಬಿಸಿಲಿಗೆ ತನ್ನಗನೇ ಒಡ್ಡಿ ಹಸುರಿಗೆ ಚೈತನ್ಯ ನೀಡುವ ವನಸಿರಿ, ಗಾಳಿಯಲ್ಲಿ ನಲಿದಾಡುವ ಹೂವುಗಳ ಕೋಮಲತೆ, ಗಾಳಿಯಲ್ಲಿ ಪಸರಿಸಿದ ಹೂಗಳ ಸುಗಂಧದ ಆಹ್ಲಾದತೆ, ರಾತ್ರಿಯಲ್ಲಿ ಚಂದಿರನಿಗೆ ಸರಿಸಾಟಿಯಾಗಿ ಮಿನುಗುವ ನಕ್ಷತ್ರ, ಇವುಗಳ ನಡುವಿನ ಬಿಳಿಯ ನೀಲಿಯ ಮೋಡಗಳೆಂಬ ಹಾಯಿ ದೋಣಿಗಳ ನಿರಂತರ ಸರಿದಾಟ, ಇಡೀ ಜಗತ್ತಿಗೆ ಸೌಮ್ಯ ಸೌಂದರ್ಯದ ಬೆಳಕನ್ನು ನೀಡುವ ತಂಪಾದ ಬೆಳದಿಂಗಳು, ಕಲ್ಪನೆಗೆ ನಿಲುಕದ ಆಗಸ, ಸಮುದ್ರದ ಪಾರವಿಲ್ಲದ ಹರವು, ನಿಗೂಢ ಗಾಂಭೀರ್ಯದ ಭೂರಮೆ ಇದನ್ನು ಕಣ್ಣಾರೆ ಕಂಡು ಆಶ್ವರ್ಯ, ಸಂತೋಷದ ಮೂಕ ಅನುಭವ ಕಾಣುವ ಮುಗ್ಧ

ಮಾನವ ಭಗವಂತನ ಲೀಲೆ ಅಪಾರ, ಮಾನವ ಅತೀತವಾದ ಅನುಭವಗಳ ಸರಮಾಲೆ ಪ್ರಕೃತಿಯ ಈ ಸೋಜಿಗೆ

ಭಗವಂತನಿಂದ ಸೃಷ್ಟಿತವಾದ ಮಾನವನ ಅಳತೆ ಮೀರಿದ ಅತೀತ ರೋಮಾಂಚಕ ಬಣ್ಣಿಸಲಾಗದ, ವಿಶ್ಲೇಷಿಸಲಾಗದ ಅನುಭವ ಕೇವಲ ಪ್ರಾಪಂಚಿಕ ವ್ಯಾಪಾರವಲ್ಲದೆ ಇದರ ಹಿಂದೆ ಭವ್ಯವಾದದ್ದು ಏನೋ ಇರಬೇಕು ಎನ್ನುವ ವಿಚಾರ ಶಕ್ತಿಯೆ ದೇವರು ಎಂದರೇನು ಎನ್ನುವ ಪ್ರಶ್ನೆಗೆ ಪ್ರೇರಣೆ ನೀಡುವುದು ಇದಕ್ಕೆ ಉತ್ತರವು ವಿಚಾರ ಶಕ್ತಿಯೆ ದೇವರು ಎಂದರೆ ಬೆಳಕು,, ಬೆಳಕು ಅಂದರೆ ಜ್ಞಾನ ಅಥವಾ ಕಾಣ್ಕೆ ಇದನ್ನೇ ದರ್ಶನ ಎನ್ನುತ್ತೇವೆ. ದೇವರಲ್ಲಿ ಸ್ವಾರ್ಥಕ್ಕಾಗಿಯೋ, ಲೋಕಕಲ್ಯಾಣಕ್ಕಾಗಿಯೋ ಬೇಡಿಕೆ ಮಂದಿಟ್ಟಾಗ ಬೇಡುವವನಲ್ಲಿ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ಆತ್ಮಬಲದ ವರ್ಧನೆಗಾಗಿಯೇ ನಂದಾದೀಪವನ್ನು ಬೆಳಗಿಸುತ್ತೇವೆ ದೇವರು ಎನ್ನುವ ಶಕ್ತಿ ಸೃಷ್ಟಿಯ ವೈವಿಧ್ಯಕ್ಕೆ ಮತ್ತು ಮನಸ್ಸಿನ ವಿಕಾಸಕ್ಕೆ ಯಾವತ್ತು ರೂಪಕವೇ

ದೇವರು ಸರ್ವಾಂತರ್ಯಾಮಿ, ದೇವನೊಬ್ಬ ನಾಮ ಹಲವು, ದೇವರೊಬ್ಬನೆ ಎನ್ನುವ ಮಾತುಗಳನ್ನು ಕೇಳುತ್ತಲೇ ಬಂದಿದ್ದೇವೆ ಹಿಂದೂ ಪರಂಪರೆಯಲ್ಲಿ ವಿವಿಧ ದೇವರುಗಳಿಗೆ ಭಕ್ತಿಯ ಸಮರ್ಪಣೆ ಪರಂಪರಾನುಗತವಾಗಿ ನಡೆಯುತ್ತದೆ, ಸೃಷ್ಟಿಕರ್ತ ಬ್ರಹ್ಮ, ಸ್ಥಿತಿಕರ್ತ – ವಿಷ್ಣು, ಲಯಕರ್ತ– ಶಿವ ಹಿಂದಿನಿಂದಲೂ ತ್ರಿಮೂರ್ತಿಗಳ ಕಲ್ಪನೆ ಇರುವಂತಹದ್ದೇ. ಶಿಷ್ಟ ದೇವರುಗಳಾದ ಬ್ರಹ್ಮ – ವಿಷ್ಣು – ಮಹೇಶ್ವರರ ಪೂಜೆ ಅಂದಿನಿಂದ ಇಂದಿನವರೆಗೂ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಇದರ ಜೊತೆಗೆ ಊರಿನ ಗಡಿಯಲ್ಲಿದ್ದು ನಮ್ಮನ್ನು ಕಾಪಾಡುತ್ತಾಳೆ ಎನ್ನುವ ನಂಬಿಕೆಯಲ್ಲಿ ಮಾರಿ, ಮಸಣಿ, ಕಾಳಿ ಮುಂತಾದ ಕ್ಷುದ್ರ ದೇವತೆಗಳ ಪೂಜೆಯನ್ನು ಆಧುನಿಕ ಕಾಲಘಟ್ಟದಲ್ಲು ಪರಂಪರಾನುಗತವಾಗಿ ನಡೆಸಿಕೊಂಡು ಬರುತ್ತಿದ್ದೇವೆ ಇದಲ್ಲದೆ ಸಾವಿನ ಅಪಾಯಗಳನ್ನು ತರುವ ಸಾಂಕ್ರಾಮಿಕ ರೋಗಗಳನ್ನು ಕೂಡ ಕ್ಷುದ್ರ ದೇವತೆಗಳ ಸಾಲಿನಲ್ಲಿಯೆ ಪೂಜೆಗೆ ಒಳಗುಮಾಡುತ್ತಿದ್ದೇವೆ– ಪ್ಲೇಗು ಮಾರಮ್ಮ ಏಡ್ಸ್‌ಮಾರಮ್ಮ ರಕ್ಕಾಸಮ್ಮ ಇಂದು ಇಡೀ ಜಗತ್ತನ್ನೇ ತನ್ನ ಕಬಂದ ಬಾಹುಗಳಲ್ಲಿ ಅಡಗಿಸಿಕೊಂಡು ನಡುಗಿಸುತ್ತಿರುವ ಕರೋನ ಮಾರಮ್ಮ ಕೂಡ ಮುಂದೆ ಇದೇ ಸಾಲಿಗೆ ಸೇರ್ಪಡೆಯಾಗಬಹುದು

ಕಾಲ ಸರಿದ ಹಾಗೆ ಭಕ್ತಿಯ ಆರಾಧನೆಯ ಬದಲಾವಣೆಗೆಗೆ ಒಳಗಾಯಿತು 12 ನೇ ಶತಮಾನದ ಕ್ರಾಂತಿಯುಗದಲ್ಲಿ ದೇಹವೇ ದೇವಾಲಯ ಎನ್ನುವ ಪ್ರತಿಪಾದನೆ, ಅಶಾಶ್ವತ ದೇವಾಲಯಗಳ ಪರಿಕಲ್ಪನೆಯ ವಿರುದ್ಧವಾಗಿ ನಿಂತ ಶಿವಶರಣ ಬಳಗ "ನಾನು ದೇವರಲ್ಲದೆ ನೀ ದೇವರೆ" ಎನ್ನುವ ದಾಷ್ಟ್ಯ, ಕಲ್ಲಿಮನೆಯ ಮಾಡಿ ಆ ಕಲ್ಲಿ ಮನೆಯೊಳಗೊಂದು ಕಲ್ಲಿ ದೇವರ ಕೂರಿಸಿ ಆ ಕಲ್ಲು ಈ ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದನೂ ಎಂದು ಪ್ರಶ್ನಿಸುವ ಶೂನ್ಯಸಿಂಹಾನಾದೀಶ ಅಲ್ಲಮಪ್ರಭು, ದೇಹವೇ ದೇವಾಲಯವಾಗಬೇಕು ಎನ್ನುವ ನೆಲೆಗಟ್ಟಿನಲ್ಲಿ " ಉಳ್ಳವರು ಶಿವಾಲಯದ ಮಾಡುವರು, ನಾನೇನ ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಭ, ದೇಹವೇ ದೇಗುಲ ಶಿರವೇ ಹೊನ್ನಕಳಸವಯ್ಯ, ಜೀವಂತ ದೇಹವೇ ಸಾಧನೆಯ ಸಿದ್ಧಿಯ ಮುಖೇನ ಆತ್ಮ ಚೈತನ್ಯದ ಭಗವಂತನನ್ನು ಜಾಗೃತಗೊಳಿಸಿ ಜೀವಂತ ದೇವಾಲಯವಾಗಿ ಪರಿವರ್ತಿತವಾಗಬೇಕು ಎನ್ನುವ ಅದಮ್ಯ ಕಲ್ಪನೆ ಬಸವಣ್ಣನವರದು, ಅಲ್ಲದೇ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಸಕಲ ಜೀವಿಗಳಿಗೂ ಲೇಸನೆ ಬಯಸುವ ಮಾನವೀಯ ಧರ್ಮದ ಮಂತ್ರದೊಂದಿಗೆ ನಿರಂತರ ಕಾಯಕ ನಿರ್ವಹಿಸುತ್ತಾ ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿ ಇಡೀ ಸಮಾಜದ, ಸಮುದಾಯದ ಬದವಲಾವಣೆಯ ಕ್ರಾಂತಿಗೆ ಸಾಕ್ಷಿಯಾಗಿದ್ದು ಇಂದಿಗೂ ಸುವರ್ಣಾಕ್ಷರದಲ್ಲಿ ಬರೆದಿಡಲ್ಪಟ್ಟ ಯುಗವಾಗಿರುವುದು 12ನೇ ಶತಮಾನದ ಹಿರಿಮೆ

ಇದಾದ ನಂತರ ಸಾಮಾಜಿಕ ಜಾಗೃತಿಯ ಗುರಿಯಿಂದ ಹೊರಬಂದ ದಾಸಸಾಹಿತ್ಯದ ಕೀರ್ತನೆಗಳನ್ನು ಗಮನಿಸಿದರೆ " ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ ಎನ್ನುವ ನಿಲುವಿನಲ್ಲಿ ಅಂತರಂಗ ಬಹಿರಂಗ ಶುದ್ಧಿಯಿಂದ ಅನನ್ಯ ಭಕ್ತಿಯ ಕಡೆಗೆ ಮನುಷ್ಯ ಜೀವನ ನೆಲೆಗೊಳ್ಳಬೇಕೆಂಬ ಅದಮ್ಯ ಅಕಾಂಕ್ಷೆಯು ವ್ಯಕ್ತವಾಗುತ್ತದೆ.

ಆಧುನಿಕ ಕಾಲಘಟ್ಟದಲ್ಲಿ ವಿಶ್ವ ಮಾನವತಾ ಪ್ರತಿವಾದಿಯಾದ ಕುವೆಂಪು ಅವರ ಕಲ್ಪನೆಯ ದೇವರು ಎಂದರೆ "ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು" ಸರ್ವಸಮಾನತಾ ಸುಖೀ ಸಮಾಜದ ವಿಶ್ವ ಮಾನವತಾ ಪ್ರತಿಪಾದನೆ "ಯಾ ದೇವಿ ಸರ್ವಭೂತೇಷು". "ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರ ಬನ್ನಿ ಬಡತನವ ಬುಡಮಟ್ಟ ಕೀಳಬನ್ನಿ, ಮೌಢ್ಯತೆಯ ಮಾರಿಯನು ಹೂರದೂಡಲೈತನ್ನಿ ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ ಈ ಬನ್ನಿ ಸೋದರರೆ ಬೇಗ ಬನ್ನಿ" ಎನ್ನುವ ವಾಸ್ತವದ ದೇವರೆ ಕಲ್ಪನೆ

ಇಂದು ದೇವರುಗಳ ಅಸ್ತಿತ್ವದ ವ್ಯಾಪ್ತಿಯು ವಿಸ್ತಾರಗೊಳ್ಳುತ್ತಿದೆ. ಟಿ ವಿ ಯಲ್ಲು ವರ್ಣಿತರಾಗಿ ಮಾಧ್ಯಮಗಳ ಭವಿಷ್ಯಕಾರರ ಭವಿಷ್ಯವು ದೇವರೆ ಆಗಿದ್ದಾನೆ. ಜ್ಯೋತಿಷ್ಯದ ಬಹುಭಾಗವನ್ನು ಆಕ್ರಮಿಸಿರುವ ಆಕ್ರಮಿತ ದೇವರುಗಳನ್ನು ನೋಡಬಹುದು " ಅವರವರ ಭಾವಕ್ಕೆ ಅವರವರ ಭಕುತಿಗೆ ನೀನೊಲಿದಂತೆ ಕಾಣೊ" ಎನ್ನುವ ನೆಲೆಗಟ್ಟಿನಲ್ಲಿ ನಂಬಿದ ಮನಸಿನ ಭಕ್ತಿಯ ಸ್ವರೂಪದ ಹಲವು ಮಜಲುಗಳನ್ನು ಕಾಣಬಹುದು

ಇಷ್ಟೆಲ್ಲಾ ದೇವರ ಪರಿಮಿತಿಯನ್ನು ವಿವಿಧ ಮನಸ್ಸುಗಳ ಭಕ್ತಿಯ ಸ್ವರೂಪವನ್ನು ನಾಟಕದಲ್ಲಿ ವಿಭಿನ್ನವಾಗಿ ಮಾಡಿಸುವ ತಂತ್ರವನ್ನು ವಿಜಯಾರವರು ನಿರೂಪಿಸಿದ್ದಾರೆ. ದೇವಸ್ಥಾನದ ನಿರ್ಮಾಣದ ಜೊತೆಗೆ ಕೀರ್ತಿಶನಿಯ ಬೆನ್ನು ಹತ್ತಿರುವ ರಾಜಕಾರಣಿ ಪರಮೇಶ್ವರಪ್ಪ ಲಂಚತಿಂದು, ಕೆಟ್ಟಕೆಲಸಮಾಡಿ ಹಣ ಮಾಡುವ ಶ್ರೀಮಂತರನ್ನು ದೋಚುವ ಹುನ್ನಾರದಲ್ಲಿ ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲದ ಬಡವರು, ಅಸಹಾಯಕರಿಂದಲೂ ಚಂದಾವಸೂಲಿ ಮಾಡುವ ಪರಿ ಅವರ ನೋವು ಓದುಗರ ಮನಸ್ಸನ್ನು ಕಲಕುತ್ತದೆ

ಲೇಖಕಿ ನಾಟಕದಲ್ಲಿ ಹಲವು ಪಾತ್ರಗಳ ಮುಖೇನ ಸಮಾಜದ ವಿವಿಧ ಸ್ತರಗಳ ಮನಸ್ಥಿತಿಯನ್ನು ಅನಾವರಣಗೊಳಿಸಿದ್ದಾರೆ. ಆ ಪಾತ್ರಗಳನ್ನು ಅರ್ಥೈಸಿಕೊಳ್ಳದಿದ್ದರೆ ನಾಟಕ ಬಿರುಗಾಳಿಗೊಡ್ಡಿದ ಗಾಳಿಪಟದಂತೆ ಸೂತ್ರ ಕಡಿದುಕೊಳ್ಳುತ್ತದೆ. ನಾಟಕದ ಆರಂಭದಲ್ಲೇ ನಾಯಕನಾದ ಪರಮೇಶ್ವರಪ್ಪನ ಬಗೆಗಿನ ಆಡುವ ಮಾತುಗಳು ಧಾರ್ಮಿಕ ಮುಖಂಡನ ನಯವಂಚಕ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ ಪರಮೇಶ್ವರಪ್ಪ ವಿಚಿತ್ರನಗರದ ನಾಯಕ, ಮಹಾಜ್ಞಾನಿ ಅಲ್ಲಲ್ಲ ಅಜ್ಞಾನಿ, ಹಳ್ಳಿಯಿಂದ ದಿಲ್ಲಿಯವರೆಗೆ ಎಲ್ಲರ ಪ್ರಾಣಹಿಂಡುವವನು.ಧಾರ್ಮಿಕ ಮಹಾನಾಯಕ ಎಂದು ನಕ್ಷತ್ರಿಕರಂತಿರುವ ಅವನ ಶಿಷ್ಯರ ಅವನ ವ್ಯಕ್ತಿತ್ವದ ಚಿತ್ರಣ ನೀಡಿದ್ದಾರೆ. ಅನ್ಯಾಯಗಳನ್ನು ನಡೆಸಿ ಕಳ್ಳದಂದೆಯ ಮುಖೇನ ಸಮಾಜದ ಮುಗ್ಧ ಜನಗಳಿಗೆ ದ್ರೋಹವೆಸಗಿ ಹಣ ಸಂಪಾದನೆಯೆ ಮುಖ್ಯವೆಂದು ಪರಿಗಣಿಸಿರುವ ಕಂಟ್ರಾಕ್ಟರ್, ಹೋಟಲ್ಲಿನ ಬೋರ್ಡಿನೊಂದಿಗೆ ವೇಶ್ಯಾವಾಟಿಕೆ ನಡೆಸುವ ಹೋಟಲ್ಲಿನ ಯಜಮಾನ, ಕಳ್ಳ ಸಾಗಾಣೆಯ ಮೂಲಕ ಶ್ರೀಮಂತನಾಗಿರುವ ಸ್ಮಗ್ಲರ್ ಇವರೆಲ್ಲರ ಸಂಪಾದನೆಗೆ ಕೊರತೆಯಾಗದಂತೆ ಸರಾಗವಾಗಿ ವ್ಯಾಪಾರ ಸಾಗಬೇಕಾದರೆ ಪರಮೇಶ್ವರನೆಂಬ ಪರಮಾತ್ಮನ ಕೃಪೆ ಇಲ್ಲದಿದ್ದರೆ ಹೇಗೆ ? ಇದರೊಂದಿಗೆ ಅಸಹಾಯಕವಾಗಿ ಒಪ್ಪತ್ತಿನ ಊಟಕ್ಕೂ ಕಷ್ಟಪಟ್ಟು ಹಸಿವಿನ ಬವಣೆಯಿಂದ ಭಿಕ್ಷೆಬೇಡಿ ಜೀವಿನಸಾಗಿಸುತ್ತಿರುವ ಭಿಕ್ಷುಕ, ದಿನನಿತ್ಯದ ಕೂಲಿಯನ್ನೆ ನಂಬಿಬದುಕುವ ಕೂಲಿಯವ, ಜೀವನ ನಿರ್ವಹಣೆಗಾಗಿ ಇಡ್ಲಿ

ಮಾರುವ ಹುಡುಗ, ಬಡತನದಲ್ಲೆ ಆಯಸ್ಸು ಕಳೆಯುತ್ತಿರುವ ಗುಮಾಸ್ತ, ಅಧಿಕಾರದ ಗದ್ದುಗೆ ಹಿಡಿದಿರುವ ರಾಜಕರಾಣಿಗಳು ಹಾಗೂ ಅವರ ಹಿಂಬಾಲಕರ ಅನ್ಯಾಯದ ವಿರುದ್ಧ ಅಸಹಾಯಕ ಮುಗ್ಧ ಜನಗಳ ಅಂತರಂಗದ ಕಣ್ಣನ್ನು ತೆರೆಸಿದ ಈ ಸಮಾಜದ ಪ್ರಜ್ಞಾವಂತ ನಾಗರೀಕನಾದ ಮೇಷ್ಟರು, ಹಾಗೂ ಮಾದ್ಯಮದ ಪ್ರತಿನಿಧಿಯಾಗಿ ವಾಸ್ತವತೆಯ ಅರಿವು ಮಾಡಿಸಲು ಪ್ರಯತ್ನಿಸುವ ಪತ್ರಕರ್ತ ಈ ಎಲ್ಲಾ ಪಾತ್ರಗಳು ನಾಟಕದ ಗಟ್ಟಿತನವನ್ನು ಸಶಕ್ತಗೊಳಿಸುತ್ತವೆ.

ನಯವಂಚಕ ಸಮಾಜದ ಅರಿವಿಲ್ಲದ ದೇವರ ಬಗೆಗೆ ಭಯ ಭೀತನಾಗಿರುವ ಭಿಕ್ಷುಕ ಭಿಕ್ಷೆ ಬೇಡುತ್ತಾ ಸಿಕ್ಕಲ್ಲ ಕೂಲಿ ಕೆಲಸ ಮಾಡಿ ಜೀವನ ನಿರ್ವಹಣೆಯೆ ಕಷ್ಟವಾಗಿದ್ದರೂ ಪುಣ್ಯದ ಆಸೆ ಅವನನ್ನು ಬಿಟ್ಟಿಲ್ಲ. ಪುಣ್ಯದ ನಂಬಿಕೆಯಿಂದ ಸಂಪಾದನೆಯ ಹತ್ತು ಪೈಸೆಯನ್ನು ಕಾಣಿಕೆ ಹುಂಡಿಗೆ ಹಾಕಬೇಕು ಎನ್ನುವ ಅವನ ಆಶಯಕ್ಕೆ ಪರಮೇಶ್ವರಪ್ಪನೇ ಅಡ್ಡಗಾಲು, ಚಿಟಿಕೆ ನಶ್ಯಕ್ಕು ಸಾಲದು ಹತ್ತು ಪೈಸೆ ಹಣ ಅದನ್ನು ಕಾಣಿಕೆ ಎಂದು ತೆಗೆದುಕೊಳ್ಳುವುದೇ ? ಪಾಪ ಭಿಕ್ಷುಕನ ಮನಸ್ಸಿನ ಅಲೋಚನೆಯೆ ಬೇರೆ, ಈ ಜನ್ಮದಲ್ಲಿ ಬಡತನದ ನೋವಿನ ಬವಣೆಯನ್ನು ಅನುಭವಿಸುತ್ತಿದ್ದೇನೆ. ನೀಡುವ ಅತ್ಯಲ್ಪ ಕಾಣಿಕೆಯಿಂದಲಾದರೂ ಮುಂದಿನ ನನ್ನ ಜೀವನದಲ್ಲಿ ಆ ಭಗವಂತ ಒಳಿತನ್ನು ಮಾಡಲಿ, ದಯೆಯನ್ನು ತೋರಿಸಲಿ ಎನ್ನುವ ಬಯಕೆ ಭಿಕ್ಷುಕನದು.

ನಾಟಕದಲ್ಲಿ ಕೂಲಿಯವ ಹಾಗೂ ಇಡ್ಲಿ ಮಾರುವ ಹುಡುಗನ ಸಂಭಾಷಣೆಯನ್ನು ಗಮನಿಸಿದರೆ ವಾಸ್ತವ ಬದುಕಿನ ದಾರುಣತೆ ಕಣ್ಣಂಚನ್ನು ತುಂಬುತ್ತದೆ. ದೇವರ ಬಗೆಗಿನ ಮೂಢನಂಬಿಕೆಯ ಪರಿ ಇಲ್ಲಿ ಚಿತ್ರಿತವಾಗಿದೆ. ಇಡ್ಲಿ ಮಾರುವ ಹುಡುಗ ಮಾರುವುದಕ್ಕಾಗಿ. ಜನರನ್ನು ಆಕರ್ಷಿಸುವುದಕ್ಕಾಗಿ ಕೂಗುತ್ತಲೇ ಇದ್ದಾನೆ ಕೂಲಿಯವನಿಗೆ ಹೊಟ್ಟೆ ಹಸಿದಿದ್ದರೂ ಇವತ್ತು ದೊರಕಿರುವ ಕೂಲಿ 2 ಇಡ್ಲಿಗೂ ಸಾಕಾಗುತ್ತಿಲ್ಲ ಮನೆಯ ಪರಿಸ್ಥಿತಿಯೂ ದಾರುಣವಾಗಿದೆ ಕೂಸಿಗೆ ಹುಷಾರಿಲ್ಲ, ಗಂಜಿಗೆ ನುಚ್ಚಿಲ್ಲ ತಾನು ಹಸಿದಿದದ್ದರೂ ಪರವಾಗಿಲ್ಲ ದೇವರ ಹುಂಡಿಗೆ ಕಾಣಿಕೆ ಹಾಕಲೇಬೇಕು, ದೇವರು ಶಾಪಕೊಡದಿದ್ದರು ಪರಮೇಶ್ವರ ಹಾಗೂ ಅವರ ಶಿಷ್ಯರ ಶಾಪಕ್ಕೆ ಗುರಿಯಾಗಬಾರದಲ್ಲ ಹೆಂಡತಿ ಮಗುವಿನ ಗತಿಯೇನು ಪ್ರಭಾವಿಗಳ ದೃಷ್ಟಿಬಿದ್ದರೆ ಶನಿ ಹೆಗಲೇರಿದಂತೆಯೇ ಆದರೆ ಇಡ್ಲಿ ಮಾರುವ ಹುಡುಗನ ಮಾತುಗಳಲ್ಲಿ ಕೋಪ ಧ್ವನಿಸುತ್ತಿದೆ.

"ಇದ್ದ ಕಾಸೆಲ್ಲ ಹುಂಡಿಗೆ ಹಾಕಿ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕ್ಕೊಂಡು ಹೋಗ್ಬುಟ್ಟ ಹಂಗಾದ್ರೆ ನಾವ್ಹೆಂಗೆ ಬದುಕಾದು ? ತಾನು ಹಸ್ಕೊಂಡು ನಮ್ಮಂತೋರ ಹೊಟ್ಟೆ ಮೇಲೂ ಕಲ್ಲು ಹಾಕು ಅಂತ ದೇವರು ಎಲ್ಲಿ ಹೇಳಿದಾನೆ" ಎನ್ನುವ ಈ ಮಾತುಗಳು ಹಿರಿಯರು ಭಿತ್ತಿದ ಪರಂಪರೆಯ ಬೀಜಗಳು ಬೆಳೆದು ಮೂಡಿಸಿರುವ ಭಯವನ್ನು ನಿರೂಪಿಸುತ್ತದೆ

ಅಗತ್ಯ ಇರುವವರು, ಪರ್ಮಿಟ್‌ಗಳು ಬೇಕಾದವರು, ಕಳ್ಳದಂದೆಯ ದಾಸ್ತಾನುಗಾರರು, ನಯವಂಚಕ ಸಮಾಜದ ಬೆಂಬಲಿಗರು, ಕಳ್ಳಸಾಗಣೆದಾರರು, ಕಳ್ಳಲೆಕ್ಕ ಬರೆಯುವವರು, ವಸೂಲಿಯಿಂದಲೇ ಕೆಲಸ ನಿರ್ವಹಿಸುವವರು ಎಲ್ಲರೂ ಈ ವಿಚಿತ್ರ ನಗರದ ನಾಯಕನ ಬೆಂಬಲಿಗರಾದ ಶ್ರೀಮಂತ ವರ್ಗ ಇವರು ಬೇಕಾದ ಹಾಗೆ ಕಾಣಿಕೆಯನ್ನು ನೀಡುವವರು. ಲೇಖಕಿ ನಾಟಕದಲ್ಲಿ ಸಮಾಜದ ವರ್ಗಗಳ ಸ್ಥಿತಿಗತಿಗಳನ್ನು ಚಿತ್ರಿಸಿದ್ದಾರೆ ಇದಲ್ಲದೆ ದುಡ್ಡಿಲ್ಲದೆ ಅಸಹಾಯಕರಾಗಿ ನೋವಿನೊಂದಿಗೆ. ಬಡತನದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಜೀವಿಸುತ್ತಿರುವ ಬಡವರ್ಗ, ಆರಕ್ಕೇರದೆ ಮೂರಕ್ಕಿಳಿಯದೆ ಶ್ರೀಮಂತಿಕೆಯ ಕನಸನ್ನು ಕಾಣುತ್ತಾ ಇರುವ ಬಡತನವನ್ನು ಒಪ್ಪಿಕೊಳ್ಳಲಾರದೆ ಬವಣೆಯನ್ನು ಸಹಿಸಲಾರದೆ ತ್ರಿಶಂಕು ಸ್ಥಿತಿಯಲ್ಲಿರುವ ಮಧ್ಯಮವರ್ಗ, ಈ ವರ್ಗಗಳು ಇಂದಿನ ಸಮಾಜದ ವಾಸ್ತವದ ದೌರ್ಬಲ್ಯಕ್ಕೆ ಹಿಡಿದ ಕೈಗನ್ನಡಿಯೂ ಹೌದು

ಶ್ರೀಮಂತ ಕಂಟ್ರಾಕ್ಟರ್‌ಗೆ ಬಿಲ್ಡಿಂಗ್‌ಗಳನ್ನು ಕಟ್ಟಲು ಪರಮೇಶ್ವರಪ್ಪನ ದಯೆಬೇಕು, ಅದಕ್ಕಾಗಿ 1500ರೂಗಳ ಕ್ಯಾಷ್ ತಂದಿದ್ದಾನೆ ಸಿಮೆಂಟ್, ಕಬ್ಬಿಣದ ಬಗೆಗೆ ಈ ದೇವರು ದೃಷ್ಟಿ ಹರಿಸಬೇಕಷ್ಟೇ ಇನ್ನು ಹೆಚ್ಚಿನ ಕಾಣಿಕೆ ಕೊಡಲು ಯಾವುದೇ ತಕರಾರು ಇಲ್ಲ

ನೆಪಮಾತ್ರಕ್ಕೆ ಹೋಟಲ್ಲಿನ ಬೋರ್ಡು ಇದೆ ಅದರ ಹಿಂದೆ ಹೋಟಲ್ಲಿನ ನೆಪದಲ್ಲಿ ವೇಶ್ಯವಾಟಿಕೆ ನಡೆಯುತ್ತಿದೆ. ಪೋಲಿಸರ ಆಗಮನದ ಸುದ್ದಿ ತಿಳಿಸಿ ಹೋಟಲ್ಲಿನ ರಕ್ಷಣೆ ಮಾಡಬೇಕು ಈ ದೇವರು ಈ ದೇವರೆ ಆ ಹೋಟಲ್ಲಿನ ಓಪನಿಂಗ್ ಕೂಡ ಮಾಡಿರುವುದು ಅದಕ್ಕಾಗಿಯೇ 500 ರೂ ಸದ್ಯಕ್ಕೆ ತಂದಿದ್ದಾನೆ ಮುಂದಿನವಾರ 15000 ಕಾಣಿಕೆ ತಲುಪಿಸುತ್ತಾನೆ. ಆದರೆ ಪರಮೇಶ್ವರಪ್ಪ ದೇವರಿಗೆ ಇಬ್ಬರು ಹೆಂಡಿರು ಯಾವ ಮನೆಗೆ ಹೋಗಬೇಕು ಎನ್ನುವ ಅನುಮಾನ ಗೊಂದಲ ಹೋಟಲ್ಲಿನ ಯಜಮಾನನಿಗೆ

ಕಳ್ಳ ಸಾಗಣೆ ಮಾಡಿ ಶ್ರೀಮಂತನಾಗಿರುವ ಸ್ಮಗ್ಲರ್ ಇಂತಹ ನಾಲ್ಕು ದೇವಸ್ಥಾನ ಕಟ್ಟಿಸಿ ಕೊಡುವುದಕ್ಕೂ ಸಿದ್ಧ, ಆದರೆ ಅವನಿಂದ ಹಣ ಪಡೆದು ಸಿಕ್ಕಿ ಹಾಕಿಕೊಂಡರೆ ಅವನ ಜೊತೆ ಇವರು ಬಯಲಿಗೆ ಬರುತ್ತಾರೆ ಇದರ ಭಯ ಅದಕ್ಕಾಗಿಯೆ ಊರ ಜನರಿಂದ ಹಣ ವಸೂಲಿ ಮಾಡಬೇಕು ದೇವಸ್ಥಾನ ಕಟ್ಟಬೇಕು ಅದು ಪರಮೇಶ್ವರಪ್ಪನ ಹೆಸರಲ್ಲೆ ಇರಬೇಕು ಉಪಾಯ ಅನುಕೂಲಕರವಾಗಿಯೆ ಇದೆ ಅಲ್ಲವೆ ?

ಫ್ಯಾಕ್ಟರಿ ಮಾಲೀಕನಿಗೂ ಇವನೇ ಪರಮಾತ್ಮ ಅದಕ್ಕಾಗಿಯೆ ಕಂತೆ ಕಂತೆ ನೋಟನ್ನು ಹುಂಡಿಗೆ ಹಾಕುತ್ತಾನೆ ಅರ್ಧ ಹುಂಡಿಗೆ ಅರ್ಧ ಶಿಷ್ಯರ ಜೇಬಿಗೆ, ಕಾರ್ಮಿಕರು ಮುಷ್ಕರ ಹೂಡಿದರೆ ಎಷ್ಟು ದಿನ ಉಪವಾಸವಿದ್ದರು ಕೊನೆಗೆ ಕಾಲಿಗೆ ಬೀಳಲೆ ಬೇಕು ಇದಕ್ಕೆಲ್ಲ ವಿಚಿತ್ರಪುರುದ ಪರಮಾತ್ಮ ಸಹಕರಿಸಿದರೆ ಸಾಕು, ಎಲ್ಲರು ಅವರವರ ಸ್ವಾರ್ಥಗಳ ಬಗ್ಗೆಯೇ ಯೋಚಿಸುತ್ತಾರೆ ದೇವರು ದೇವಸ್ಥಾನ ಮುಖ್ಯವಲ್ಲ ದೇವರು ದೇವಸ್ಥಾನ ಇವರ ಸ್ವಾರ್ಥದ ಮಾಧ್ಯಮ ಅಷ್ಟೆ

ಬಡವರ ಅಸಹಾಯಕತೆ ಶ್ರೀಮಂತರ ಅಟ್ಟಹಾಸವನ್ನೆ ನೋಡಿದೆವು. ಆದರೆ ಈ ಸಮಾಜದಲ್ಲಿ ಅದಕ್ಕೇರದ ಮೂರಕ್ಕಿಳಿಯದ ಮಧ್ಯಮವರ್ಗದ ಬವಣೆಯನ್ನು ನೋಡಬೇಕಲ್ಲ ಅದರ ಒಂದು ಮುಖ ಗುಮಾಸ್ತನ ನೋವು, ಪಾಪವನ್ನು ಕಳೆದುಕೊಂಡು ಪುನೀತರಾಗ ಬೇಕಾದರೆ ದೇವಸ್ಥಾನಕ್ಕೆ ಕಾಣಿಕೆ ನೀಡಬೇಕು, ಕಾಣಿಕೆಯ ಹಣ ಮುಕ್ತಿಗೆ ದಾರಿತೋರಿಸುತ್ತದೆ. ಸಂಸಾರದ ಹೊರೆ ಹೊತ್ತು – ಹೊತ್ತು ಗುಮಾಸ್ತನ ಬೆನ್ನುಬಾಗಿದೆ. ಅದರೆ ಭಕ್ತಿಯನ್ನು ಮಿರಲಾದೀತೆ ? ಹೆಂಡತಿ ಉಳಿಸಿದ ಸಾಸಿವೆ ಡಬ್ಬಿಯ ಚಿಲ್ಲರೆ ಹಣ ಒಟ್ಟುಗೂಡಿಸಿ 10 ರೂಪಾಯಿ ತಂದಿದ್ದಾನೆ ಹೊಟ್ಟೆಗಾದರೆ ಬಟ್ಟೆಗಿಲ್ಲ ಬಟ್ಟೆಗಾದರೆ ಹೊಟ್ಟೆಗಿಲ್ಲ ದೇವರೆ ಮನೆಬಾಗಿಲಿಗೆ ಬಂದಿರುವಾಗ 100 ರೂ ಕಾಣಿಕೆ ಕೊಡಲೇಬೇಕು, ಇಲ್ಲದಿದ್ದರೆ ಕೆಲಸ ಕಳೆದುಕೊಳ್ಳಬೇಕು ಕೆಲಸ ಉಳಿಸಿಕೊಳ್ಳಬೇಕಾದರೆ ಪ್ರತೀ ತಿಂಗಳೂ ಚಂದಾ ರೂಪದಲ್ಲಿ ಹಣವನ್ನು ನೀಡುವ ವ್ಯವಸ್ಥೆ ಮಾಡಿದ್ದಾನೆ ಪರಮೇಶ್ವರ ದೇವಸ್ಥಾನದ ನಿರ್ಮಾಣಕ್ಕೆ ಯಾರ್‍ಯಾರೆಲ್ಲಾ ಏನೇನನ್ನೂ ಸಹಿಸಬೇಕು ಮಾರ್ವಾಡಿ ಬಡ್ಡಿಗೆ ಬರುತ್ತಾನೆ ಅದರ ಜೊತೆಗೆ ಪರಮೇಶ್ವರನ ನಿಯಮಿತ ನಕ್ಷತ್ರಿಕರು ಸೇರಿಕೊಂಡರು ಅಸಹಾಯಕರ ನೋವಿಗೆ ಆ ದೇವರು ಕಿವುಡನೆ ?

ಅಸಹಾಯಕರು, ಮುಗ್ಧರು, ಶ್ರೀಮಂತರ ಜೊತೆಗೆ ಈ ಸಮಾಜದ ಅವಿಭಾಜ್ಯ ಅಂಗ ವಿದ್ಯಾವಂತ ನಾಗರೀಕರು ಈ ನಾಟಕದಲ್ಲಿ ತ್ರಿಮೂರ್ತಿಗಳಿಗಿಂತಲೂ ಹೆಚ್ಚಿನ ಜವಬ್ದಾರಿಯನ್ನು ಹೊತ್ತಿರುವ ಮೇಸ್ಟರು ಕಲಿತ ವಿದ್ಯೆಗೆ ಮೋಸ ಮಾಡದೆ ಗಳಿಸಿದ ಜ್ಞಾನದಿಂದ

ಸಮಾಜದ ಜಾಗೃತಿಗೆ ಮೂಲವಾದವನು. ಕಿಷ್ಕಿಂದಾಪುರದ ಜಾಗೃತಿಯ ಹರಿಕಾರ, ಪರಮೇಶ್ವರಪ್ಪನಿಗೆ ಹಳ್ಳಿಯ ಮೂಲ ಸ್ವರೂಪದ ಚಿತ್ರಣ ನೀಡಿದ ಮಹನೀಯ. ಹಳ್ಳಿಯಲ್ಲಿ ಮೂಲಭೂತ ಸೌಕರ್ಯಗಳಾದ ನೀರು, ಲೈಟು, ಆಸ್ಪತ್ರೆ, ಪೋಲೀಸ್ ಸ್ಟೇಷನ್ ಯಾವುದು ಇಲ್ಲ ಸರ್ಕಾರಿ ಲೆಕ್ಕದ ಪ್ರಕಾರ ನಾಲ್ಕು ಶಾಲೆಗಳಿವೆ ಎರಡು ಶಾಲೆ ಮರದ ಕೆಳಗೆ ನಡೆಯುತ್ತದೆ ಮಳೆ ಬಂದರೆ ಬಿಸಿಲು ಹೆಚ್ಚಾದ್ರೆ ಸ್ಕೂಲಿಗೆ ರಜೆ ಪಾಠ ಮಾಡೋದು ಇನ್ನೆಲ್ಲಿ ಬಂತು ? ಇನ್ನೊಂದು ಶಾಲೆಯಲ್ಲಿ ಮೇಷ್ಟರಿದ್ದಾನೆ. ವಿದ್ಯಾರ್ಥಿಗಳಿಲ್ಲ. ಸರ್ಕಾರಿ ಸಂಬಳದವನು ಗ್ರಾಂಟ್ ದುಡ್ಡು ತಿಂದು ಹೆಗ್ಗಣ ಅದ್ದಾಗೆ ಆಗಿದ್ದಾನೆ. ಇರುವ ಇನ್ನೊಂದು ಶಾಲೆಯಲ್ಲಿ 30 ರಿಂದ 40 ಜನ ವಿದ್ಯಾರ್ಥಿಗಳಿದ್ದಾರೆ ನಾನೇ ಮೇಷ್ಟ್ರ ವಿಪರ್ಯಾಸವೆಂದರೆ ಸೂರು ಯಾವಾಗ ಕಳಚಿ ಬೀಳುತ್ತೊ ಗೊತ್ತಿಲ್ಲ ರಿಪೇರಿ ಮಾಡಿಸದಿದ್ದರೆ ತಾರಸಿ ಬಿದ್ದು ಮಕ್ಕಳ – ಮೇಸ್ಟರ ಮರಣ ಅನ್ನೊ ಸುದ್ದಿ ಪೇಪರ್‌ನಲ್ಲಿ ನೋಡ್ ಬೇಕಾಗುತ್ತೆ, ನನ್ನ ಮಾತನ್ನು ಯಾರು ಕೇಳ್ತಾರೆ. ಹಳ್ಳಿಗೆ ಶಾಲೆಯ ದೇವಸ್ಥಾನ, ಶಾಲೆ ಬಂದಿದ್ರೆ ಅದೇ ದೇವರ ಸನ್ನಿದಿ ಇದ್ದ ಹಾಗೆ "ಜನ ಸೇವೆಯೆ ಜನಾರ್ಧನ ಸೇವೆ" ಎನ್ನುವ ರಾಜಕಾರಣಿಗಳು ತಿಳಿಯಬೇಕಾದದ್ದು – ಮನುಷ್ಯನಿಗೆ ಬೇಕಾಗಿರುವುದು ಉದ್ಯೋಗ, ವಸತಿ, ಎರಡು ಹೊತ್ತು ಊಟ ಆ ಮೇಲೆ ಮಿಕ್ಕ ಅಪೇಕ್ಷೆ ಇದನ್ನೆಲ್ಲ

ಹೇಳಿದ್ರೆ ನಿಮ್ಮಂತ ಹೊಟ್ಟೆ ತುಂಬಿದ ಜನಗಳಿಗೆ "ಹರಿಕಥೆ" ಅಂತ ಅನ್ನಿಸುತ್ತೆ.ಇದು ಇಂದಿನ ಸಮಾಜದ ಪರಿಸ್ಥಿತಿ. ಭವಿಷ್ಯದ ರೂವಾರಿಗಳಾದ ಮಕ್ಕಳಿಗೆ ವಿದ್ಯೆ ಕಲಿಸದಿದ್ದರೂ ಪರವಾಗಿಲ್ಲ ಶ್ರೀಮಂತರ ಹೆಸರು ಉಳಿಯುವ ದೇವಸ್ಥಾನಗಳಿರಬೇಕು, ಬಡ ಮೇಷ್ಟರ ಮಾತನ್ನು ಕೇಳಿಸಿಕೊಳ್ಳುವವರಾರು ಬರೀ ಮೂಕ ರೋಧನ ಅಷ್ಟೆ

ಈ ಗಲಾಟೆಯನ್ನು ಕೇಳಿ ಬರುವ ಪತ್ರಕರ್ತ ಪರಮೇಶ್ವರಪ್ಪನಿಗೆ ವಾಸ್ತವವನ್ನು ತಿಳಿಸಿ ಹೇಳುವ ಪ್ರಯತ್ನ ಮಾಡುತ್ತಾನೆ. ಹಣದ–ಅಧಿಕಾರದ ಗದ್ದುಗೆಯವಾಳ ಹಿಡಿದ ರಾಜಕಾರಣಿಗಳ ಮುಂದೆ ಇದು ವ್ಯರ್ಥವಷ್ಟೆ. ಪರಮೇಶ್ವರಪ್ಪನೆ ಪತ್ರಕರ್ತನಿಗೆ ಹೆದರಿಸಿ–ಬೆದರಿಸಿ ಪತ್ರಿಕೆಯ ಮುಂದಿನ ಪುಟದಲ್ಲಿ ದೊಡ್ಡ ಪೋಟೊ ಹಾಕಿ "ಸಮಾಜ ಸೇವಕನ ಸೇವಾಕಾರ್ಯ" ಎಂದು ವರದಿ ಪ್ರಕಟಿಸುವಂತೆ ಒತ್ತಾಯಿಸಿ ಹೆದರಿಸಿದಾಗ ಅವನಿಗೂ ಕೋಪ ಮಿತಿಮೀರುತ್ತದೆ. ಮ್ಯಾನೆಜ್‌ಮೆಂಟ್‌ಗೆ ಪೋನ್ ಮಾಡ್ಕೊಳ್ಳಿ ನಿಮ್ಮಂತ ರಾಜಕಾರಣಿಗಳು ವಾಕ್ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಪತ್ರಿಕಾಧರ್ಮ ಅಂತ ಮಾತಾಡೋದೆ ನಮ್ಮ ದೇಶದ ದುರ್ದೈವ ಎಂದು ಪತ್ರಕರ್ತ ಪರಮೇಶ್ವರನ ದಬ್ಬಾಳಿಕೆಯನ್ನು ಖಂಡಿಸಿ ಸ್ಥಳದಿಂದ ನಿರ್ಗಮಿಸುತ್ತಾನೆ.

"ಜಾಗೃತಿಯೇ, ಜೀವನ ನಿಷ್ಕ್ರಯತೆಯೇ ಮರಣ ಸೋಲು ಗೆಲವುಗಳ ಸಮ್ಮಿಲನದಲ್ಲಿ ನೀ ಕಲಿಯುವ ಪಾಠವೇ ಅಂತಿಮ. ಶಿಕ್ಷಕ ಮತ್ತು ಪತ್ರಕರ್ತ ಹತ್ತಿಸಿದ ಕಿಡಿ ಜನರ ಮನಸ್ಸಿನಲ್ಲಿ ಬೆಚ್ಚಗಾಗಲು ಪ್ರಾರಂಭವಾಗುತ್ತದೆ. ಅದೇ ಸಂದರ್ಭದಲ್ಲಿ ಶಿಕ್ಷಕ ದೇವರು ಧರ್ಮದ ಹೆಸರಿನಲ್ಲಿ ಪರಮೇಶ್ವರಪ್ಪ ಆತನ ಶಿಷ್ಯರು ಮಡುತ್ತಿರುವ ನಯವಂಚಕತನದ ಜಾಗೃತಿಯ ಅಭಿಯಾನದ ಪ್ರಾರಂಭದ ಹೆಜ್ಜೆಯ ತೆರೆ ಸರಿಯಿತು. ನಿಜವಾದ ದೇವರ ಭಕ್ತಿ ಹೇಗಿರಬೇಕೆಂಬುದನ್ನು ಜನರಿಗೆ ತಿಳಿಸುತ್ತಾನೆ. ಈ ರಾಜಕಾರಣಿಗಳು "ಬಡತನ ದೂರಮಾಡಿ ಎಂದರೆ ಬಡವರನ್ನೇ ದೂರ ಮಾಡುತ್ತಿದ್ದಾರೆ" ನೀವೆಲ್ಲರೂ ಯಾಕೆ ಪ್ರತಿಭಟಿಸುತ್ತಿಲ್ಲ ದೇವರು ಒಂದು ತುಳಸೀದಳ ಇಟ್ಟು ಭಕ್ತಿಯಿಂದ ಬೇಡಿಕೊಂಡ್ರು ಒಲೀತಾನೆ, ಇಷ್ಟೆ ಕೊಡಬೇಕು ಎಂದು ದೇವರು ಎಲ್ಲಾದರೂ ಹೇಳಿದ್ದಾನೆಯೇ ?ನೀವು ಇಂಥವರು ಹೇಳಿದ್ದಕ್ಕೆಲ್ಲಾ ಒಪ್ಪಿಕೊಳ್ಳುತ್ತಿದ್ದರೆ ನಾಯಿಕೊಡೆಗಳ ಹಾಗೆ ಹೆಚ್ಚಿಕೊಂಡು ಎತ್ತರಕ್ಕೆ ಬೆಳದು ಬಿಡ್ತಾರೆ. ಅವರ ಅಂತಸ್ತುಗಳು ಮೇಲೇರಿ ನಿಮ್ಮ ಗುಡಿಸಲುಗಳು ನಿರ್ನಾಮ ಆಗುತ್ತವೆ. ಅವರಿವರ ಉಪದೇಶ ಬೇಡ ನಿಮ್ಮ ನಿಮ್ಮ ಮನಸ್ಸೇ ಇದಕ್ಕೆ ಉತ್ತರವಾಗಬೇಕು ಎನ್ನುವ ಮಾತು ಮೇಷ್ಟರದು, ದೇವರು ಧರ್ಮ ಭಕ್ತಿಯ ಬಗ್ಗೆ ಸರಿಯಾದ ಅರಿವು ಇಲ್ಲದ ಮುಗ್ಧ ಜನರು ಇಂತಹ ನಯವಂಚಕ ವ್ಯವಸ್ಥೆಗೆ ಬಲಿಯಾಗುತ್ತಿರುವ ಸಂದರ್ಭದಲ್ಲಿ ಮಾಧ್ಯಮ ಮತ್ತು ಶಿಕ್ಷಿತ ಸಮಾಜ ಪ್ರಾಮಾಣಿಕವಾಗಿ ಹೋರಾಟ ಮಾಡಿದರೆ ನಯವಂಚಕ ವ್ಯವಸ್ಥೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಜನರನ್ನು ಸಹ ಪರಿವರ್ತಿಸಬಹುದು ಎನ್ನುವುದು ನಾಟಕದ ದೊಡ್ಡ ತಿರುವು.

ಜಾಗೃತಿಯ ಕಿಡಿ ಉರಿಯ ತೊಡಗಿದರೆ ಸಮಾಜದಲ್ಲಿ ಬದಲಾವಣೆಯ ಹೆಜ್ಜೆಗಳು ಪ್ರಾರಂಭವಾಗುತ್ತವೆ ಇಡೀ ವ್ಯವಸ್ಥೆಯನ್ನು ತನ್ನ ತೆಕ್ಕೆಗೆ ಎಳೆದು ಕೊಳ್ಳುತ್ತದೆ. ಶಿಕ್ಷಕನ ವಿಚಾರಗಳನ್ನು ಚೆನ್ನಾಗಿ ಅರ್ಥೈಸಿಕೊಂಡ ಜನರು ಪರಮೇಶ್ವರಪ್ಪ ಮತ್ತು ಆತನ ಶಿಷ್ಯರ ವಿರುದ್ಧ ಕೂಗುವ ಧಿಕ್ಕಾರದ ಕೂಗು ಶಿಷ್ಯರ ಮನಸ್ಸಿನಲ್ಲಿಯೂ ಪರಿವರ್ತನೆಯನ್ನು ತರುತ್ತದೆ. ಅನ್ಯಾಯ, ಅಕ್ರಮಗಳ ಕೋಟೆಯಿಂದ ಹೊರಬಂದು ಶುದ್ಧವಾದ ಗಾಳಿಯಲ್ಲಿ, ಪ್ರೀತಿಸೋ ಜನರ ಮಧ್ಯ ನಿಂತು ಪರಮೇಶ್ವರಪ್ಪನ ಮೋಸ, ಹಗಲು ದರೋಡೆಯ ಬಗ್ಗೆ ತಿಳಿಸಿ, ಮೇಷ್ಟರು ಹೇಳುವ ಸತ್ಯವನ್ನು ಒಪ್ಪಿಕೊಳ್ಳುವ ಪಶ್ಚಾತ್ತಾಪದ ಮನೋಸ್ಥಿತಿ " ಸತ್ಯಕ್ಕೆ ಜಯವಿದೆ" ಎನ್ನುವ ವಾಕ್ಯವನ್ನು ನೆನಪಿಸುತ್ತದೆ. ನಾಟಕದ ಕೊನೆಯಲ್ಲಿ ಪ್ರಾರಂಭವಾಗುವ ಈ ಪ್ರತಿಭಟನೆಯ ಸೆಳುವಿನಲ್ಲಿ ಪರಮೇಶ್ವರಪ್ಪನ ಇಬ್ಬರೂ ಶಿಷ್ಯರು ಪರಮೇಶ್ವರಪ್ಪನಿಗೆ ಧಿಕ್ಕಾರ ಹಾಕುವುದು ನಾಟಕದ ವಿಶೇಷತೆ ಮುಗ್ಧ ಜನರು ಜಾಗೃತರಾದರೆ ವಂಚನೆಯ ಕೋಟೆ ಪುಡಿ ಪುಡಿಯಾಗುತ್ತದೆ. ಸಮಾಜದ ಜನರನ್ನು ತಿದ್ದುವ, ಜಾಗೃತಗೊಳಿಸುವ ಕೆಲಸವನ್ನು ಸುಶಿಕ್ಷಿತರಾದವರು ಮಾಡಬೇಕಷ್ಟೆ. ಜನರ ಮನಸ್ಸಿನ ಒಳಗೆ ಇರುವ ಬೆಚ್ಚನೆಯ ಕಿಡಿಗೆ ಜಾಗೃತಿಯ ಬೆಂಕಿಯನ್ನು ತಾಗಿಸಬೇಕಷ್ಟೇ ಇಂತಹ ಸೋಗಲಾಡಿ ರಾಜಕಾರಣಿ, ಕೊಲೆಗಡುಕರ, ಭ್ರಷ್ಟ ರಾಜಕಾರಣಿಗಳ, ಜನರ ದೈವ ಭಕ್ತಿಯನ್ನು ಬಳಸಿ ಬೆದರಿಸಿ ಬೊಕ್ಕಸ ತುಂಬಿಕೊಳ್ಳುವ ಇಂತಹವರ ಹುನ್ನಾರಕ್ಕೆ ತೆರೆಬೀಳುತ್ತದೆ. ಇನ್ನಾದರೂ ಇಂತಹವರ ವಿರುದ್ಧವಾಗಿ ನಾಗರೀಕ ಸಮಾಜ ಎಚ್ಚೆತ್ತುಕೊಳ್ಳಬೇಕು

ಧಾರ್ಮಿಕ ಶೋಷಣೆಯ ವಿರುದ್ಧವಾಗಿ ಜನಸಾಮಾನ್ಯರಲ್ಲಿ ಎಚ್ಚರದ ಜಾಗೃತಿ ಮೂಢಿ ಬರಬೇಕು ಅಧಿಕಾರದ ಗದ್ದುಗೆ ಹಿಡಿಯುವ ಸರ್ಕಾರಗಳು ಜನಸಾಮಾನ್ಯರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಕಡೆ ಹೆಚ್ಚು ಗಮನ ಕೊಡದೆ ಇಂತಹ ನಿರ್ಮಾಣ ಕಾರ್ಯದ ಮುಖಂಡತ್ವವನ್ನು ವಹಿಸುವ ಇಂತಹ ಮುಖಂಡರ ಬೆಂಬಲಕ್ಕೆ ನಿಂತು ನಯವಂಚಕತನಕ್ಕೆ ಪ್ರೋತ್ಸಾಹ ನೀಡುವ ಇಂತಹವರ ವಿರುದ್ಧವಾಗಿ ಜನ ಸದಾ ಎಚ್ಚರದಿಂದಿರಬೇಕು ಸರ್ಕಾರ ನಮ್ಮದೇ ಆಗಿದ್ದರು ನಾಯಕನನ್ನು ನಾವೇ ಆರಿಸಿದ್ದರು ಅವರ ನಯವಂಚಕತನದ ಬಗೆಗೆ ಸದಾ ಜಾಗೃತರಾಗಿರಬೇಕು

ಇಂದಿನ ಸಮಾಜವನ್ನು ಅತ್ಯಂತ ಗಾಢವಾಗಿ ಬಾದಿಸುತ್ತಿರುವ ಸಮಸ್ಯೆಗಳಲ್ಲಿ ದೇವರು, ಧರ್ಮ, ದೇವಸ್ಥಾನ, ಮಠ ಮಂದಿರ ಪ್ರತಿಮೆಗಳ ಸ್ಥಾಪನೆ ಅಂದಿನಿಂದ ಇಂದಿನವರೆಗೂ ಇವುಗಳ ಅಸ್ತಿತ್ವದ ಸಂಘರ್ಷ ನಡೆದು ಬಂದಿರುವುದನ್ನು ಇತಿಹಾಸದಿಂದ ತಿಳಿಯಬಹುದು. ಇವುಗಳ ಸ್ಥಾಪನೆ, ಅಸ್ತಿತ್ವಗಳ ಸಂಘರ್ಷವನ್ನು ಯಾವ ನ್ಯಾಯಾಂಗ ವ್ಯವಸ್ಥೆಯು ಪರಿಹರಿಸಲು ಸಾಧ್ಯವಿಲ್ಲ, ಈ ಸಮಾಜದ ಪ್ರಜೆಗಳಾದ ನಾವು ಮೊದಲು ಮನುಷ್ಯರಾಗಬೇಕು ಎಥಿಟಿಡಿಜ ಃಜಜಿಂಡಿಜ ಣ ಇಥಿಟಿಡಿಜ ಎನ್ನುವ ಮಾತಿನಂತೆ ಸಾವು ಮುಟ್ಟುವ ಮುನ್ನ ಸುತ್ತಲಿನ ಸಮಾಜದ ಜಾಗೃತಿಗೆ ಕಾರಣರಾಗಬೇಕು, ಬೇರೆಯವರಿಗೆ ಮಾರ್ಗದರ್ಶಕವಾಗಬೇಕು

ನಮ್ಮ ವ್ಯಕ್ತಿತ್ವ ಇಲ್ಲಿ ಜೀವಿಸುವ ಪ್ರತೀ ಒಂದು ಮನವು ಅರಿವಿನ ಬೆಳಗನ್ನು ಬೆಳಗುವ ಹಣತೆಯಾಗಬೇಕು ನಮ್ಮ ಸುತ್ತಲಿರುವ ಒಳವೈರಿಗಳ ವಿರುದ್ಧ ಜಾಗೃತರಾಗಿರಬೇಕು ಎನ್ನುವುದೇ ಈ ನಾಟಕದ ಉದ್ದೇಶ.

ಒಂದರೊ ಬಂದರು ಎನ್ನುವ ಶೀರ್ಷಿಕೆಯನ್ನು ಗಮನಿಸಿದರೆ ಎಲ್ಲಿಯವರೆಗೆ ನಾವು ದೇವರು ಎನ್ನುವ ನಂಬಿಕೆಯ ಬೆನ್ನು ಬಿಡುವುದಿಲ್ಲವೊ ಅಲ್ಲಿಯವರೆಗೂ ಇಂತಹ ಜನನಾಯಕರ ಶೋಷಣೆಯ ಕಾರ್ಯ ನಿರಂತರವಾಗಿ ಮುಂದುವರೆಯುತ್ತಲೇ ಇರುತ್ತದೆ. ಒಬ್ಬರ ನಂತರ ಒಬ್ಬರು ಬರುತ್ತಲೇ ಇರುತ್ತಾರೆ. ಕುರಿಗಳ ಹಾಗೆ ನಾವು ಹಳ್ಳಕ್ಕೆ ಬೀಳುತ್ತಲೇ ಇರುತ್ತೇವೆ. ನಮ್ಮ ಮನಸ್ಥಿತಿ ಬದಲಾಗದೆ ಇದು ನಿಲ್ಲುವ ಪ್ರಶ್ನೆಗೆ ಇಲ್ಲ. ಎನ್ನುವ ನಿಲವು ಕಾಣುತ್ತದೆ ಇಂದಿನ ಪ್ರಸ್ತುತ ಸಮಾಜದ ಶೋಷಣೆಯ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯೂ ಹೌದು, ಕನ್ನಡಿ ಪ್ರತಿಬಿಂಬವೇ ಹೊರತು ವಾಸ್ತವವಲ್ಲ ವಾಸ್ತವದಲ್ಲಿ ಇದು ಸಾರ್ಥಕತೆಯನ್ನು ಪಡೆಯಬೇಕು ಎನ್ನುವ ಆಶಯದ ಭರವಸೆ ನಾಟಕದ್ದಾಗಿದೆ **ಜಿ**.ಎಸ್ ಶಿವರುದ್ರಪ್ಪನವರ ಕವನವನ್ನು ನೆನಪಿಸಿಕೊಳ್ಳೋಣ "ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ, ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ" ಮಾನವೀಯತೆಯ ನೆಲೆಯಲ್ಲಿ ಪ್ರೀತಿಯ ಹೂವನ್ನು ಅರಳಿಸುತ್ತಾ, ನಮ್ಮ ನಿಮ್ಮ ಮನಸ್ಸುಗಳನ್ನು ಮರುಭೂಮಿಯಾಗದ ಹಾಗೆ ಮನಸ್ಸುಗಳನ್ನು ಬೆಸೆಯುತ್ತಾ ಸರ್ವಸಮಾನತೆಯ ಸಮಾಜದ ನಾಂದಿಯ ರೂವಾರಿಗಳು ಪ್ರಜ್ಞಾವಂತ ನಾಗರೀಕರಾದ ನಾವೇ ಎನ್ನುವ ಭರವಸೆಯೆ ನಾಟಕದ ಆಶಯಕ್ಕೆ ನಾಂದಿಯಾಗಿದೆ.